

## ಉಚಿತ ಚಿಕಿತ್ಸೆಯೇ ಸರ್ಕಾರದ ಧ್ಯೇಯ

ರಾಜ್ಯದಲ್ಲಿ 171 ಸರ್ಕಾರಿ ಡಯಾಲಿಸಿಸ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅದರಲ್ಲಿ 166 ಕೇಂದ್ರಗಳು ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿವೆ. ಉಳಿದ 5 ಕಡೆಗಳಲ್ಲಿ ಸ್ಥಳದ ಅಭಾವದಿಂದ ಡಯಾಲಿಸಿಸ್ ಕೇಂದ್ರ ಸ್ಥಾಪಿಸಲು ಅವಕಾಶವಿರುವುದಿಲ್ಲ. ಅದನ್ನ ಹೊರತುಪಡಿಸಿದರೆ ಉಳಿದಂತೆ ಎಲ್ಲ ತಾಲೂಕು, ಜಿಲ್ಲಾ ಕೇಂದ್ರಗಳಲ್ಲೂ ನಮ್ಮ ಸರ್ಕಾರಿ ಡಯಾಲಿಸಿಸ್ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ರಾಜ್ಯದ ಎಲ್ಲ ಬಡ ಜನರಿಗೆ ಉಚಿತ ಚಿಕಿತ್ಸಾ ಸೌಲಭ್ಯ ದೊರೆಯಬೇಕು ಎಂಬುದು ನಮ್ಮ ಸರ್ಕಾರದ ಧ್ಯೇಯ. ಹೀಗಾಗಿ ಹೊಸದಾಗಿ ರಚನೆಯಾಗಿರುವ ಹೊಸ ತಾಲ್ಲೂಕುಗಳಲ್ಲೂ ಸರ್ಕಾರಿ ಡಯಾಲಿಸಿಸ್ ಕೇಂದ್ರಗಳನ್ನು ತೆರೆಯಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ. ಆದ್ಯತೆಯ ಅನುಸಾರ ಆ ಕಾರ್ಯವನ್ನು ಶೀಘ್ರದಲ್ಲೇ ಪೂರ್ಣಗೊಳಿಸಲಾಗುವುದು.

—ಬಿ. ಶ್ರೀರಾಮುಲು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

## ಡಯಾಲಿಸಿಸ್ ಕೇಂದ್ರಗಳಲ್ಲಿ ರಕ್ತ ತಪಾಸಣೆ

ಡಯಾಲಿಸಿಸ್ ರೋಗಿಗಳಿಗೆ ರಕ್ತನಿಧಿ ಕೇಂದ್ರಗಳಲ್ಲಿ ರಕ್ತ ತಪಾಸಣೆ ಮಾಡಲು ಅವಕಾಶವನ್ನು ರಾಜ್ಯ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಲ್ಪಿಸಿದೆ.

ರಾಜ್ಯದ 3 ಪ್ರಧಾನ ಆಸ್ಪತ್ರೆಗಳು, 20 ಜಿಲ್ಲಾ ಆಸ್ಪತ್ರೆ ಹಾಗೂ 148 ತಾಲ್ಲೂಕು ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಸೌಲಭ್ಯವನ್ನು ಉಚಿತವಾಗಿ ಕಲ್ಪಿಸಲಾಗುವುದು. ಈ ಸೌಲಭ್ಯ ಎಲ್ಲ ವರ್ಗದ ಜನರಿಗೆ 2017–18ರಿಂದಲೇ ಒದಗಿಸಲು ಇಲಾಖೆ ಅವಕಾಶ ಕಲ್ಪಿಸಿರುವುದು ಬಡ ರೋಗಿಗಳಿಗೆ ಆಶಾಕಿರಣದಂತಿದೆ.

ರಾಜ್ಯದ 163 ಆಸ್ಪತ್ರೆಗಳಲ್ಲಿ ಇಲ್ಲಿಯವರೆಗೆ 3856 ಬಡರೋಗಿಗಳು ಡಯಾಲಿಸಿಸ್ ಸೌಲಭ್ಯ ಪಡೆಯುತ್ತಿದ್ದಾರೆ. ಈ ರೋಗಿಗಳಿಗೆ ಕನಿಷ್ಠ ಮೂರು ತಿಂಗಳಿಗೊಮ್ಮೆ ELISA ವಿಧಾನದ ಮುಖಾಂತರ HIV, HBV, HCV ಸೋಂಕು ಪರೀಕ್ಷೆ ಮಾಡಬೇಕಾಗಿರುತ್ತದೆ ಎಂಬ ವಿವರಗಳನ್ನು ಇಲಾಖೆ ತಿಳಿಸಿದೆ.

ಡಯಾಲಿಸಿಸ್ ಕಾರ್ಯ ನಿರ್ವಹಿಸುತ್ತಿರುವ ಎರಡು ಆಸ್ಪತ್ರೆಗಳಲ್ಲಿ ಸುಮಾರು ರೋಗಿಗಳಿಗೆ HCV ಸೋಂಕು ತಗಲಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಜಿಲ್ಲಾ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ರಕ್ತನಿಧಿ ಕೇಂದ್ರಗಳಲ್ಲಿ ಡಯಾಲಿಸಿಸ್ ರೋಗಿಗಳಿಗೆ ಉಚಿತವಾಗಿ ಕನಿಷ್ಠ ಮೂರು ತಿಂಗಳಿಗೊಮ್ಮೆ ELISA ವಿಧಾನದ ಮುಖಾಂತರ ಸೋಂಕು ಪರೀಕ್ಷೆ ಮಾಡಲು ಕ್ರಮ ಕೈಗೊಳ್ಳಲಾಗಿದೆ.

### ಡಯಾಬಿಟಿಕ್ ಎನ್‌ಡಿ ಸಿಕೆಡಿ ರೋಗಿಗಳು

| ಯೂರಿನ್ ಅಲ್ಬುಮಿನ್ ಎಕ್ಸ್‌ಕ್ರಿಶನ್: <30 ಎಂಜಿ/24 ಗಂಟೆ ಅಥವಾ ತತ್ಸಮಾನ★ ಆಫೀಸ್ ಬಿಪಿ: >140/90 ಎಂಎಂಎಚ್‌ಜಿ | ಯೂರಿನ್ ಅಲ್ಬುಮಿನ್ ಎಕ್ಸ್‌ಕ್ರಿಶನ್: >30 ಎಂಜಿ/24 ಗಂಟೆ ಅಥವಾ ತತ್ಸಮಾನ★ ಆಫೀಸ್ ಬಿಪಿ: >130/80 ಎಂಎಂಎಚ್‌ಜಿ |
|---|---|
| ↓ | ↓ |
| ರಕ್ತದೊತ್ತಡವನ್ನು ≤140/90 ಪ್ರಮಾಣದಲ್ಲಿ ನಿರ್ವಹಿಸಲು ಆಂಟಿ ಹೈಪರ್‌ಟೆನ್ಸಿವ್ ಔಷಧಿ ಬಳಕೆ (1ಬಿ) | ರಕ್ತದೊತ್ತಡವನ್ನು ≤130/80 ಪ್ರಮಾಣದಲ್ಲಿ ನಿರ್ವಹಿಸಲು ಆಂಟಿ ಹೈಪರ್‌ಟೆನ್ಸಿವ್ ಔಷಧಿ ಬಳಕೆ (2ಡಿ) |

### ಜಿಎಫ್ ಆರ್ ಮತ್ತು ಅಲ್ಬುಮಿನಾರಿಯ ಮೂಲಕ ಸಿಕೆಡಿ ಮುನ್ಸೂಚನೆ: ಕೆಡಿಐಜಿಒ 2012

| | | | | ಪರ್ಸಿಸ್ಟಂಟ್ ಅಲ್ಬುಮಿನಾರಿಯಾ ಕೆಟಗರಿಗಳು: ವಿವರ ಮತ್ತು ಶ್ರೇಣಿ | | |
|---|---|---|---|---|---|---|
| | | | | A1 | A2 | A3 |
| | | | | ಸಾಮಾನ್ಯದಿಂದ ಸ್ವಲ್ಪ ಹೆಚ್ಚಳ | ಮಧ್ಯಮ ಪ್ರಮಾಣದ ಹೆಚ್ಚಳ | ತೀವ್ರ ಹೆಚ್ಚಳ |
| | | | | < 30 ಮಿಲಿ ಗ್ರಾಂ/ < 3 ಮಿಲಿ ಗ್ರಾಂ/ಮಿಲಿ ಮೋಲ್ | 30–300ಮಿಲಿ ಗ್ರಾಂ/ 3–30 ಮಿಲಿ ಮೋಲ್ | > 300ಮಿಲಿ ಗ್ರಾಂ/ >30 ಮಿಲಿ ಮೋಲ್ |
| ಜಿಎಫ್‌ಆರ್ ಕೆಟಗರಿಗಳಲ್ಲಿ (ಎಂಎಲ್/ಮಿನಿಟ್ 11.73 ಎಂ2 | ಜಿ1 | ಸಹಜ/ಗರಿಷ್ಠ | 90 | | | |
| | ಜಿ2 | ಸ್ವಲ್ಪ ಕುಂಠಿತ | 60–89 | | | |
| | ಜಿ3ಎ | ಸ್ವಲ್ಪದಿಂದ ಗಣನೀಯ ಕುಂಠಿತ | 45–59 | | | |
| | ಜಿ3ಬಿ | ಗಣನೀಯದಿಂದ ತೀವ್ರ ಕುಂಠಿತ | 30–44 | | | |
| | ಜಿ4 | ತೀವ್ರವಾಗಿ ಕುಂಠಿತ | 15–29 | | | |
| | ಜಿ5 | ಮೂತ್ರಪಿಂಡ ವೈಫಲ್ಯತೆ | 15 | | | |